# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2221** |
| **ಸದಸ್ಯರ ಹೆಸರು** | : | **ಶ್ರೀ ಚಿದಾನಂದ ಎಂ. ಗೌಡ ( ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **26.03.2026** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿಯವರು** |

*******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಿನಾಂಕ:22.02.2026 ರಂದು ಅಭಿವೃದ್ಧಿ ಶುಲ್ಕ ಮೌಲ್ಯವರ್ಧಿತ ಸಕ್ರಮ ಆಸ್ತಿ ಹೊಂದುವ ಅವಕಾಶ ಎಂದು ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ಯಾವ ಬಡಾವಣೆಗಳಿಗೆ ಅಭಿವೃದ್ಧಿ ಶುಲ್ಕ ಪಾವತಿಸಲು ತಿಳಿಸಿದೆ; ಎಲ್ಲಾ ಬಡಾವಣೆಗಳು ಪ್ರಾರಂಭಕ್ಕೆ ಅಧಿಸೂಚನೆ ಹೊರಡಿಸಿದ ದಿನಾಂಕ ಮತ್ತು ಬಡಾವಣೆಗಳು ಪೂರ್ಣಗೊಂಡ ದಿನಾಂಕದ ಸಂಪೂರ್ಣ ವಿವರ ನೀಡುವುದು. | ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಪ್ರಾರಂಭಿಕ ಅಧಿಸೂಚನೆಯಲ್ಲಿದ್ದು ನಂತರ ಯಾವ ಕಾರಣಗಳಿಗಾಗಿ ಸದರಿ ಸ್ವತ್ತಿನ ಭೂಸ್ವಾಧೀನವನ್ನು ಕೈಬಿಡಲಾಗಿರುತ್ತದೆ. | ಪ್ರಾರಂಭಿಕ ಅಧಿಸೂಚನೆ ಹೊರಡಿಸಿ ನಿಯಮಾನುಸಾರ ನೋಟಿಸ್ ನೀಡಿದ ನಂತರ, ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಕ್ರಮವಹಿಸಲಾಗಿರುತ್ತದೆ. |
| ಇ) | ಅಭಿವೃದ್ಧಿ ಶುಲ್ಕವನ್ನು ಯಾವ ಉದ್ದೇಶಕ್ಕಾಗಿ ವಿಧಿಸಲಾಗುತ್ತದೆ; ಬಡಾವಣೆ ಪ್ರಾರಂಭವಾದ ಅಥವಾ ಮುಕ್ತಾಯವಾದ ಎಷ್ಟು ದಿನಗಳಲ್ಲಿ / ತಿಂಗಳಲ್ಲಿ ವಿಧಿಸಬೇಕಾಗಿರುತ್ತದೆ; | ಪ್ರಾರಂಭಿಕ ಅಧಿಸೂಚನೆಯಲ್ಲಿರುವ ಜಮೀನುಗಳನ್ನು ಅಂತಿಮ ಅಧಿಸೂಚನೆಯಿಂದ ಹೊರತುಪಡಿಸಲಾದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 20 ರಡಿ ನಿರ್ದಿಷ್ಟಪಡಿಸಿರುವಂತೆ ಅಭಿವೃದ್ಧಿ ತೆರಿಗೆಯನ್ನು ವಿಧಿಸಲಾಗುತ್ತಿದೆ. |
| ಈ) | ಬಡಾವಣೆಗಳು ಪೂರ್ಣಗೊಂಡು ನಿವೇಶನಗಳು ಹಂಚಿಕೆಯಾಗಿ ದಶಕಗಳೇ ಕಳೆದ ನಂತರ ಈಗ ಅಭಿವೃದ್ಧಿ ಶುಲ್ಕ ವಿಧಿಸಲು ಕಾರಣಗಳೇನು; ಇಲ್ಲಿಯವರೆಗೂ ಅಭಿವೃದ್ಧಿ ಶುಲ್ಕ ವಿಧಿಸದೆ ಇರಲು ಕಾರಣವೇನು; | • ಈಗಾಗಲೇ 21 ಬಡಾವಣೆಗಳಿಗೆ ಅಭಿವೃದ್ಧಿ ಶುಲ್ಕ ವಿಧಿಸಿ ಆದೇಶಿಸಲಾಗಿದ್ದು, ಕೆಲವು ನಿವೇಶನಗಳ ಶುಲ್ಕ ಪಾವತಿ ಬಾಕಿ ಇರುತ್ತದೆ.<br>• ಡಾ. ಕೆ. ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದಂತೆ 17 ಗ್ರಾಮಗಳಿಗೆ ಅಭಿವೃದ್ಧಿ ಶುಲ್ಕ ವಿಧಿಸಲಾಗಿದ್ದು, ಇಲ್ಲಿಯವರೆಗೂ ಅಭಿವೃದ್ಧಿ ಶುಲ್ಕ ಪಾವತಿಸದೇ ಬಾಕಿ ಇರುವ ಸ್ವತ್ತುಗಳಿಗೆ ಅಭಿವೃದ್ಧಿ ಶುಲ್ಕ ವಿಧಿಸಲಾಗುತ್ತದೆ (**ಅನುಬಂಧ-2**). |

| | | |
|---|---|---|
| ಊ) | ಅಭಿವೃದ್ಧಿ ಶುಲ್ಕ ವಿಧಿಸುವಲ್ಲಿ ಕೆಲವೊಂದು ಬಡಾವಣೆಯಲ್ಲಿ ಅತೀ ಕಡಿಮೆ ವಿಧಿಸಿ ಕೆಲವೊಂದು ಬಡಾವಣೆಗೆ ಹೆಚ್ಚಾಗಿ ವಿಧಿಸಲು ಕಾರಣಗಳೇನು? | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976ರ ನಿಯಮ 20ರಂತೆ ಪ್ರಾಧಿಕಾರವು ಬಡಾವಣೆ ರಚನೆಗೆ ಭೂಸ್ವಾಧೀನಪಡಿಸಿಕೊಳ್ಳುವ ಮುನ್ನ ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರು ನಿಗದಿಪಡಿಸಿರುವ ಮಾರುಕಟ್ಟೆ ದರದ ಹಾಗೂ ಬಡಾವಣೆಯ ರಚನೆ ಪೂರ್ಣಗೊಂಡ ನಂತರ ನಿಗದಿಪಡಿಸುವ ದರದ, ವ್ಯತ್ಯಾಸದ ಮೌಲ್ಯದಲ್ಲಿ 1/3 ರಷ್ಟನ್ನು ಅಭಿವೃದ್ಧಿ ಶುಲ್ಕವಾಗಿ ನಿಗದಿಪಡಿಸಲಾಗುತ್ತದೆ. ಆದುದರಿಂದ ವಿವಿಧ ಬಡಾವಣೆಗಳಿಗೆ ನಿಗದಿಪಡಿಸುವ ದರಗಳಲ್ಲಿ ವ್ಯತ್ಯಾಸವಿರುತ್ತದೆ. |

**ಸಂಖ್ಯೆ**: ನಅಇ 89 ಬೆಂಭೂಸ್ವಾ 2026

**(ಡಿ.ಕೆ ಶಿವಕುಮಾರ್)**
ಉಪ ಮುಖ್ಯಮಂತ್ರಿ

# ಅನುಬಂಧ-1

| ಕ್ರ. ಸಂ | ಬಡಾವಣೆಯ ಹೆಸರು | ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕ | ಬಡಾವಣೆ ಪೂರ್ಣಗೊಳಿಸಿದ ದಿನಾಂಕ (ಪ್ರಾಧಿಕಾರದ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ಸಂಬಂಧಿಸಿದ ಸಂಸ್ಥೆಗಳಿಗೆ ಹಸ್ತಾಂತರಿಸಿರುವ ದಿನಾಂಕ) |
|---|---|---|---|
| 1 | ಬನಶಂಕರಿ 6ನೇ ಹಂತ ಮುಂದುವರೆದ ಬಡಾವಣೆ | No:BDA/SALAO/A4/PR/194/2002-03 Dated: 07/11/2002 | |
| 2 | ಬನಶಂಕರಿ 6ನೇ ಹಂತ | No:BDA/SLAO/A4/PR/192/2000-01 Dated: 15/11/2000 | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 651 ಬೆಂಅಸೇ 2025 (ಇ) ದಿನಾಂಕ:08-01-2026. |
| 3 | ಅಂಜನಾಪುರ ಬಡಾವಣೆ | No:BDA/SLAO/292/98-99 Dated: 23/03/1999 | |
| 4 | ಬನಶಂಕರಿ 5ನೇ ಹಂತ ಹಂತ | No:BDA/SLAO/A1/324/88-89 Dated: 13/04/1989 | ಮಾನ್ಯ ಆಯುಕ್ತರವರ ಪತ್ರ ಸಂಖ್ಯೆ:BDA/commr/KV /67/2007-08 Dt:16-10-2007. |
| 5 | ಜೆ.ಪಿ.ನಗರ 9ನೇ ಹಂತ | No:BDA/SLAO/A4/PR/257/88-89 Dated: 17/11/1988 | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 651 ಬೆಂಅಸೇ 2025 (ಇ) ದಿನಾಂಕ:08-01-2026. |
| 6 | ಅರ್ಕಾವತಿ ಬಡಾವಣೆ | No:BDA/Commr/ALAO/LA9/104/02-03, Dated: 3/2/2003 | ಪ್ರಸ್ತುತ ಬಡಾವಣೆಯು ಗೌರವಾನ್ವಿತ ಶ್ರೀ.ಕೆ.ಎನ್.ಕೇಶವನಾರಾಯಣ ಸಮಿತಿಯಲ್ಲಿದ್ದು ಸದರಿ ಬಡಾವಣೆಯು ಪೂರ್ಣಗೊಂಡಿರುವುದಿಲ್ಲ. |
| 7 | ವಿಶ್ವೇಶ್ವರಯ್ಯ ಮುಂದುವರೆದ ಬಡಾವಣೆ | No:BDA/Commr/SALAO/79/03-04 Dated: 8/4/2003 | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 651 ಬೆಂಅಸೇ 2025 (ಇ) ದಿನಾಂಕ:08-01-2026. |
| 8 | ಆರ್.ಎಂ.ವಿ 2ನೇ ಹಂತ | No:BDA /A3/PR 511/ SLAO/76-77 Dated:03.01.1977 | ದಿನಾಂಕ:17.07.2001 ರಂದು ಬಿಬಿಎಂಪಿಗೆ ಹಸ್ತಾಂತರವಾಗಿರುತ್ತದೆ. |
| 9 | ಹೆಚ್.ಬಿ.ಆರ್.1ನೇ ಹಂತ | No:BDA/ALAO/S/11/78-79 Dated:27June 1978 | ಅಧಿಸೂಚನೆ ಸಂಖ್ಯೆ:UDD/631/MNX/2000, dated:08.01.2002 ಮತ್ತು 24.01.2002ರಲ್ಲಿ ಸಿ.ಎಂ.ಸಿ.ಗೆ ಹಸ್ತಾಂತರವಾಗಿರುತ್ತದೆ. |
| 10 | ಹೆಚ್.ಬಿ.ಆರ್ ಎರಡನೇ ಹಂತ | No:HC/PR/ALAO/12/78-79 Dated:29.05.1978 | ಅಧಿಸೂಚನೆ ಸಂಖ್ಯೆ:UDD/631/MNX/2000, dated:08.01.2002 & 24.01.2002ರಲ್ಲಿ ಸಿ.ಎಂ.ಸಿ.ಗೆ ಹಸ್ತಾಂತರವಾಗಿರುತ್ತದೆ. |
| 11 | ಹೆಚ್.ಬಿ.ಆರ್ ಮೂರನೇ ಹಂತ | No:HC/ALAO/13/BDA/78-79 Dated:2.06.1978 | ಅಧಿಸೂಚನೆ ಸಂಖ್ಯೆ:UDD/631/MNX/2000, dated:08.01.2002 & 24.01.2002ರಲ್ಲಿ ಸಿ.ಎಂ.ಸಿ.ಗೆ ಹಸ್ತಾಂತರವಾಗಿರುತ್ತದೆ. |

| | | | |
|---|---|---|---|
| 12 | ಹೆಚ್.ಆರ್.ಬಿ.ಆರ್ | No:HC/PR/ALAO/389 /BDA/76-77 Dated:21.03.1977 | ಸಂಖ್ಯೆ:UDD/633/MNX/2000, ದಿನಾಂಕ:28.08.2001ರಂದು ಸಿ.ಎಂ.ಸಿ.ಗೆ ಹಸ್ತಾಂತರವಾಗಿರುತ್ತದೆ. |
| 13 | ಜ್ಞಾನಭಾರತಿ ಬಡಾವಣೆ | No:BDA/ALAO /A3/139/88-89, Dated:19.01.1989 | ಅಧಿಸೂಚನೆ ಸಂಖ್ಯೆ:UDD 631 MNX 2000 ದಿನಾಂಕ:18-01-2002. |
| 14 | ಬಿ.ಟಿ.ಎಂ 4ನೇ ಹಂತ | No:BDA / ALAO / A1 /PR / 117, Dated:15.08.1988 | ಅಧಿಸೂಚನೆ ಸಂಖ್ಯೆ: UDD 78 MNX 2006 ದಿ: 05-05-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. |
| 15 | ಬಿ.ಟಿ.ಎಂ 6ನೇ ಹಂತ | No:BDA /ALAO/A5/ 18/87-88, Dated:08.09.1987 | ಅಧಿಸೂಚನೆ ಸಂಖ್ಯೆ:UDD/78/MNX/ 2006 ದಿನಾಂಕ:05-05-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. |
| 16 | ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ | No:BDA/COMMR /DC(LA)/ALAO /10/2001-2002 Dated:14.12.2001 | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/651/ಬೆಂಆಸೇ/2025(ಇ) ದಿನಾಂಕ:08-01-2026. |
| 17 | ಹೆಚ್.ಎಸ್.ಆರ್ ಬಡಾವಣೆ | No:HUD/295/MNX/ 84, Dated:15.12.1984 | ಅಧಿಸೂಚನೆ ಸಂಖ್ಯೆ: UDD/78/MNX/ 2006 ದಿನಾಂಕ:05-05-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. |
| 18 | ಶಿನಿವಾಗಿಲು ಟ್ಯಾಂಕ್ ಬೆಡ್ ಬಡಾವಣೆ | No:HUD/71/MNX/84 Dated:20.05.1984 | ದಿನಾಂಕ:30-09-1998 |
| 19 | ಈಸ್ಟ್ ಆಫ್ ಎನ್.ಜಿ.ಎಫ್ ಬಡಾವಣೆ | No:HUD/238/MNX/ 79, Dated:28.05.1984 | ಸಂಖ್ಯೆ:UDD/633/MNX/2000, ದಿನಾಂಕ:28.08.2001ರಂದು ಸಿ.ಎಂ.ಸಿ.ಗೆ ಹಸ್ತಾಂತರವಾಗಿರುತ್ತದೆ. |
| 20 | ಮುಂದುವರೆದ ಈಸ್ಟ್ ಆಫ್ ಎನ್.ಜಿ.ಎಫ್ ಬಡಾವಣೆ | No:BDA/SALAO/C4/ PR/T-461/87-88 Dated:28/03/88 | ಸಂಖ್ಯೆ:UDD/633/MNX/2000, ದಿನಾಂಕ:28.08.2001ರಂದು ಸಿ.ಎಂ.ಸಿ.ಗೆ ಹಸ್ತಾಂತರವಾಗಿರುತ್ತದೆ. |
| 21 | ಜೆ.ಪಿ.ನಗರ 8ನೇ ಹಂತ ಬಡಾವಣೆ | No:BDA/SALAO/A6/ PR/229/87-88 Dated:23/03/1988 | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/651/ಬೆಂಆಸೇ/2025(ಇ) ದಿನಾಂಕ:08-01-2026. |
| 22 | ನಾಡಪ್ರಭು ಕೆಂಪೇಗೌಡ ಬಡಾವಣೆ | No:BDA/Commr/DC (LA)/ ALAO/ 158/2008-09, Dated:21.05.2008 | ಬಡಾವಣೆಯ ಅಭಿವೃದ್ಧಿಕಾರ್ಯ ಪ್ರಗತಿಯಲ್ಲಿರುತ್ತದೆ. |

ಪ್ರಾಧಿಕಾರದ ಸಭೆಯ ದಿನಾಂಕ:07.03.2024
ವಿಷಯ ಸಂಖ್ಯೆ:67/24

ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ದಿನಾಂಕ: 25.09.2023 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:137/23ರಲ್ಲಿ ಮಂಡಿಸಲಾಗಿದ್ದ ಪ್ರಸ್ತಾವನೆಯನ್ನು ಹೆಚ್ಚಿನ ವಿವರಗಳಿಗಾಗಿ ಮುಂದೂಡಲಾಗಿರುತ್ತದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿರುವ 2018ನೇ ಸಾಲಿನ ವಸತಿ ಉದ್ದೇಶದ ನಿವೇಶನ ಮೌಲ್ಯ ಹಾಗೂ 2024ನೇ ಸಾಲಿನ ವಸತಿ ಉದ್ದೇಶದ ನಿವೇಶನ ಮೌಲ್ಯದಲ್ಲಿನ ವ್ಯತ್ಯಾಸದ ಮೊತ್ತದ 1/3 ರಷ್ಟು ಮೌಲ್ಯವನ್ನು ಪುರೋಭಿವೃದ್ಧಿ ತೆರಿಗೆಯಾಗಿ ವಿಧಿಸಲು ಹಾಗೂ ಸ್ವತ್ತಿನ ವಸತಿ ಹಾಗೂ ವಾಣಿಜ್ಯ ಉಪಯೋಗದ ಅಂಶವನ್ನು ಗಮನದಲ್ಲಿರಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976, ಸೆಕ್ಷನ್ 20 ಮತ್ತು 21ರ ಬೆಳಕಿನಲ್ಲಿ ಈ ಕೆಳಕಂಡಂತೆ ಪ್ರತಿ ಚದರ ಮೀಟರ್‌ಗೆ ದರ ವಿಧಿಸಲು ಅನುಮೋದಿಸಲಾಯಿತು:

**FIXATION OF BETTERMENT TAX UNDER SECTION 20 AND 21 OF BDA ACT 1976**

| Sl No | Village | Betterment Tax Rate Per Sq Mtr | Betterment Tax Rate Per Sq Ft |
|---|---|---|---|
| 1 | SOMASHETTY HALLI | 5,000.00 | 465.00 |
| 2 | GANIGARAHALLI | 5,000.00 | 465.00 |
| 3 | BYALAKERE | 1,833.00 | 170.00 |
| 4 | RAMAGONDANAHALLI | 11,067.00 | 1,028.00 |
| 5 | DODDABETTAHALLI | 8,667.00 | 805.00 |
| 6 | KEMPAPURA | 12,367.00 | 1,149.00 |
| 7 | AVALAHALLI | 6,042.00 | 561.00 |
| 8 | BAROHALLI | 1,790.00 | 166.00 |
| 9 | MEDI AGRAHARA | 667.00 | 62.00 |
| 10 | SHAMARAJAPURA | 1,833.00 | 170.00 |
| 11 | VEERASAGARA | 733.00 | 68.00 |
| 12 | VADERAHALLI | 833.00 | 77.00 |
| 13 | KEMPANAHALLI | 465.00 | 43.00 |
| 14 | J B KAVAL | 2,000.00 | 186.00 |
| 15 | KALATHAMANAHALLI | 1,167.00 | 108.00 |
| 16 | LAKSHMIPURA | 5,000.00 | 465.00 |
| 17 | GUNI AGRAHARA | 2,333.00 | 217.0 |

ಮೇಲ್ಕಂಡ ಪುರೋಭಿವೃದ್ಧಿ ತೆರಿಗೆ ದರವನ್ನು ಆಯಾ ಗ್ರಾಮಗಳ ವಸತಿ ಪ್ರದೇಶಗಳಿಗೆ ನಿಗದಿಪಡಿಸಲಾಗಿದ್ದು, ವಾಣಿಜ್ಯ ಉದ್ದೇಶದ ಪ್ರದೇಶಗಳಿದ್ದ ಸಂದರ್ಭದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರ ಮಾರ್ಗಸೂಚಿಯಂತೆ ಶೇ.50 ರಷ್ಟು ಹೆಚ್ಚುವರಿ ದರವನ್ನು ವಿಧಿಸಲು ಹಾಗೂ ಸ್ವತ್ತು ಮೂಲೆ ನಿವೇಶನವಾಗಿದ್ದಲ್ಲಿ ಅಥವಾ ಸ್ವತ್ತಿನ ಎರಡು ಕಡೆ ರಸ್ತೆ ಹೊಂದಿದ್ದಲ್ಲಿ ಶೇ.10 ರಷ್ಟು ಹೆಚ್ಚಿನ ದರ ನಿಗದಿಪಡಿಸಲು ನಿರ್ಣಯಿಸಲಾಯಿತು.

ಸಹಿ/-
ಅಧ್ಯಕ್ಷರು,
ಬೆಂಅಪ್ರಾ., ಬೆಂಗಳೂರು

ಪ್ರತಿ:

ಕಾರ್ಯದರ್ಶಿ,
ಬೆಂಅಪ್ರಾ., ಬೆಂಗಳೂರು

Scanned with OKEN Scanner